**ದಿನಾಂಕಃ 01-08-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ಎಂ ಜಿ ವಕೀಲರಿಂದಃ**

1. ನಾನು ಈ ಹಿಂದೆ ಪಾಟೀ ಸವಾಲಿನಲ್ಲಿ - 2017 ರಲ್ಲಿ ಆಗಿರುವ ವ್ಯವಹಾರವನ್ನು ಹೊರತು ಪಡಿಸಿ, ನನ್ನ ಹಾಗೂ ಆರೋಪಿತನ ಮಧ್ಯ ಆಗಿರುವ ಬೇರೆ ವ್ಯವಹಾರಗಳ ಕುರಿತು ಸ್ಟೇಟ್ ಮೆಂಟ್ ಗಳಲ್ಲಿ ನಮೂದಾಗಿಲ್ಲ ಎಂದು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ . ಸಾಕ್ಷಿಯು ಮುಂದುವರೆದು, 2016 ರಿಂದ 2017 ರವರಗೆ ಮಾತ್ರ ವ್ಯವಹಾರವಾಗಿದೆ ಎಂದು ನುಡಿಯುತ್ತಾರೆ. 2016 ರಿಂದ ವ್ಯವಹಾರವಾಗಿದೆ ಎಂದು ನನ್ನ ನೋಟಿಸು ಹಾಗೂ ದೂರಿನಲ್ಲಿ ಬರೆಯಿಸಿದ್ದೇನೆ. ನನ್ನ ಹಾಗೂ ಆರೋಪಿತನ ಮಧ್ಯ ಯಾವುದೇ ವ್ಯವಹಾರ ಆಗದಿದ್ದರೂ ಸಹ, 2016 ರಿಂದ ವ್ಯವಹಾರ ಆಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-9 ರಲ್ಲಿ ನಮೂದಿಸಿರುವ ದಿನಾಂಕ 21-07-2016 ರ ವ್ಯವಹಾರದ ಕುರಿತು ನೋಟಿಸು ಹಾಗೂ ದೂರಿನಲ್ಲಿ ಬರೆಯಲಾಗಿದೆಯೋ ಇಲ್ಲವೋ ಎನ್ನುವುದು ನನಗೆ ಗೊತ್ತಿಲ್ಲ. ನಾನು ಹಾಜರು ಪಡಿಸಿರುವ ದಾಖಲೆಗಳು ಬೀಜದ ವ್ಯವಹಾರಕ್ಕೆ ಸಂಬಂಧಪಟ್ಟ ದಾಖಲೆಗಳೇ ವಿನಾಃ ಆರೋಪಿತನು ನನ್ನ ಬಳಿ ಯಾವುದೇ ಸಾಲ ಪಡೆದಿಲ್ಲ ಎಂದರೆ ಸರಿಯಲ್ಲ . ನಾನು ಆರೋಪಿತನಿಂದ ಬೀಜ ಖರೀದಿಸಿದ ಕುರಿತು ಆತನಿಗೆ ಹಣ ನೀಡುತ್ತಿದ್ದೆ ಎಂದರೆ ಸರಿಯಲ್ಲ . ನಾನು ಹಾಜರು ಪಡಿಸಿರುವ ದಾಖಲೆಗಳು ಬೀಜದ ವ್ಯವಹಾರಕ್ಕೆ ಸಂಬಂಧಪಟ್ಟ ದಾಖಲೆಗಳು ಎಂದರೆ ಸರಿಯಲ್ಲ .

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ/-

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.